ಬಿದ್ದಿರುವುದರಿಂದ ವಾಹನಗಳು ಓಡಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಡಾಂಬರೀಕರಣ ಮಾಡಿಸುವ ಬಗ್ಗೆ ಸರ್ಕಾರ ಕ್ರಮಕೈಗೊಳ್ಳಲಿದೆಯೇ, ಹಾಗೂ ಎಷ್ಟು ಸಮಯದಲ್ಲಿ ಕ್ರಮ ಕೈಗೊಳ್ಳಲಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಳೆದ ಎರಡು ತಿಂಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಭಾರೀ ಮಳೆ ಬಿದ್ದಿರುವ ಹಿನ್ನೆಲೆಯಲ್ಲಿ ಹಾಗೂ ಸುರಿಯುತ್ತಿರುವ ಮಳೆಯಿಂದಾಗಿ ಈ ರಸ್ತೆಯಲ್ಲಿ ಕೆಲವು ಭಾಗಗಳಲ್ಲಿ ಹೊಂಡ ಗುಂಡಿಗಳು ಬಿದ್ದಿರುವುದು ಗಮನಕ್ಕೆ ಬಂದಿರುತ್ತದೆ.

ಆ) ಸದರಿ ರಸ್ತೆಯ ಕಿಮೀ 27.00 ರಿಂದ 52.00 ಕಿಮೀನ ಆಯ್ದ ಭಾಗಗಳಲ್ಲಿ ಅಭಿವೃದ್ಧಿ : ಡಾಂಬರೀಕರಣ ಮಾಡುವ ಬಗ್ಗೆ ರೂ. 25.00 ಲಕ್ಷಗಳ ಮೊತ್ತಕ್ಕೆ ಸಿಆರ್‌ಎಫ್ ಅಡಿಯಲ್ಲಿ ಅನುಮೋದನೆ ದೊರೆತಿದ್ದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅನುದಾನದ ಲಭ್ಯತೆಯ ಮೇರೆಗೆ ಉಳಿದ ಭಾಗಗಳಲ್ಲಿ ದುರಸ್ಥಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

532(645) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಗಳನ್ನು ಸೌರಶಕ್ತಿ ಗ್ರಾಮಗಳಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಇದ್ದಲ್ಲಿ ಯೋಜನೆಯ ಬಗ್ಗೆ ಮಾಹಿತಿ ನೀಡುವುದು;

ಇ) ಯೋಜನೆಗೆ ತಗಲುವ ಅಂದಾಜು ವೆಚ್ಚ ಎಷ್ಟು ಹಾಗೂ ಯೋಜನೆಗೆ ತಗಲಿರುವ ವೆಚ್ಚವನ್ನು ಯಾವ ಮೂಲದಿಂದ ಭರಿಸಲಾಗುವುದು;

ಈ) ಪ್ರಾರಂಭದ ಹಂತದಲ್ಲಿ ಯೋಜನೆಯನ್ನು ಎಲ್ಲಿ ಜಾರಿಗೆ ತರಲಾಗುವುದು ಹಾಗೂ ಅದು ಎಂದಿನಿಂದ ಜಾರಿಯಾಗಲಿದೆ

ಉ) ಯೋಜನೆಯು ಹಾಲಿ ಅನುಷ್ಠಾನದಲ್ಲಿರುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದ ಗ್ರಾಮಗಳನ್ನು ಸೌರಶಕ್ತಿ ಉಪಕರಣಗಳಿಂದ ವಿದ್ಯುದ್ದೀಕರಣಗೊಳಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ಯೋಜನೆಯ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ) ಈ ಯೋಜನೆಗೆ 100 ಕೋಟಿ ರೂ. ಗಳ ಅಂದಾಜು ವೆಚ್ಚವಾಗಲಿದ್ದು ಅದರಲ್ಲಿ 30 ವೆಚ್ಚವನ್ನು ಕೇಂದ್ರ ಸರ್ಕಾರದ ಎಂ.ಎನ್.ಇ.ಎಸ್.ನಿಂದ ಅನುದಾನದ ರೂಪದಲ್ಲಿ ಪಡೆದು ಉಳಿದ ಹಣವನ್ನು ರಾಜ್ಯ ಸರ್ಕಾರದಿಂದ ಪಡೆಯುವ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ರಾಜ್ಯದಲ್ಲಿ ಒಟ್ಟು 224 ವಿಧಾನ ಸಭಾ ಕ್ಷೇತ್ರಗಳಿದ್ದು ಅದರಲ್ಲಿ 200 ವಿಧಾನ ಸಭಾ ಕ್ಷೇತ್ರಗಳಲ್ಲಿ ಒಂದು ಕ್ಷೇತ್ರಕ್ಕೆ 4 ಅಥವಾ 5 ರಂತೆ ಹಳ್ಳಿಗಳನ್ನು

ಗುರುತಿಸಿ. ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಸೌರಶಕ್ತಿ ಗ್ರಾಮಗಳನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದ್ದು, ಸರ್ಕಾರದ ಅನುಮತಿ ಪಡೆದ ನಂತರ ಈ ಯೋಜನೆಯನ್ನು ಜಾರಿಗೆ ತರಲಾಗುವುದು.

ಉ) ಮಂಡಳಿ ವತಿಯಿಂದ ಪ್ರಾಯೋಗಿಕ ಆಧಾರದ ಮೇಲೆ 4 ಗ್ರಾಮಗಳನ್ನು ಸೋಲಾರ್ ಗ್ರಾಮಗಳನ್ನಾಗಿ (ರಾಯಚೂರು ಜಿಲ್ಲೆಯ ಕೋಲೂರು ಗ್ರಾಮ ಗುಲ್ಬರ್ಗಾ ಜಿಲ್ಲೆಯ ಬೋಡಬಂಡ ಗ್ರಾಮ, ಚಿಕ್ಕಮಗಳೂರು ಜಿಲ್ಲೆಯ ಹೆಮ್ಮಕ್ಕಿ ಗ್ರಾಮ ಹಾಗೂ ಮಂಡ್ಯ ಜಿಲ್ಲೆಯ ಹೆಚ್. ಕೋಡಿಹಳ್ಳಿ ಪರಿವರ್ತಿಸಲಾಗಿದೆ. ಸರ್ಕಾರದ ಅನುಮೋದನೆಯ ನಂತರ ಉಳಿದ ಗ್ರಾಮಗಳನ್ನು ಸೋಲಾರ್ ಗ್ರಾಮಗಳನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 656ಕ್ಕೆ ಅನುಬಂಧ

1. ಯೋಜನೆ : 1000 ಗ್ರಾಮಗಳಿಗೆ 100 ಮನೆಗಳಿರುವ (ಸಾರ್ವಜನಿಕ ಕಟ್ಟಡಗಳನ್ನೊಳಗೊಂಡು) ಒಂದು ಗ್ರಾಮಕ್ಕೆ ಸೌರಶಕ್ತಿ ಮೂಲಕ ಮನೆ ಮತ್ತು ಬೀದಿ ದೀಪಗಳ ವ್ಯವಸ್ಥೆ.

2. ವ್ಯವಸ್ಥೆ : ಅ) ಪ್ರತಿ ಮನೆಗೆ 7 ಮೆಗಾ ವ್ಯಾಟ್ ಸಾಮರ್ಥ್ಯದ ಎರಡು ದೀಪಗಳು ಹಾಗೂ ಸಂಬಂಧಿಸಿದ ಪರಿಕರಗಳು ಅಂದರೆ ಚಾರ್ಜ್ ಕಂಟ್ರೋಲರ್, ಬ್ಯಾಟರಿ 30 ಎ.ಎಚ್. 18 ವ್ಯಾಟ್ ಪ್ಯಾನಲ್. ಎರಡು ನಿಯಂತ್ರಿತ ಸ್ವಿಚ್ಚುಗಳು ಮತ್ತು ವೈರಿಂಗ್ ಸಹಿತವಾಗಿ, ಪ್ರತಿ ದಿನ ಸಂಜೆ 6 ರಿಂದ 10 ರವರೆಗೆ ಉರಿಯುವುದು.

ಆ) 11 ಮೆಗಾ ವ್ಯಾಟ್ ಸಾಮರ್ಥ್ಯದ 10 ಬೀದಿ ದೀಪಗಳು ಹಾಗೂ ಅದಕ್ಕೆ ಸಂಬಂಧಿಸಿದ ಪರಿಕರಗಳು ಅಂದರೆ ಚಾರ್ಜ್ ಕಂಟ್ರೋಲರ್, ಬ್ಯಾಟರಿ 80 ಎ.ಎಚ್. 74 ವ್ಯಾಟ್ ಪ್ಯಾನಲ್ ಮತ್ತು ವೈರಿಂಗ್ ಸಹಿತವಾಗಿ. ಇವುಗಳು ಸ್ವಯಂ ಚಾಲಿತವಾಗಿ ಸಂಜೆಯಿಂದ ಬೆಳಗಿನ ಜಾವದವರೆಗೆ ಕಾರ್ಯ ನಿರ್ವಹಿಸುತ್ತದೆ.

3. ಸಾಂಪ್ರದಾಯಿಕ ವಿದ್ಯುಚ್ಛಕ್ತಿ ಉಳಿತಾಯ : ಒಟ್ಟಾರೆ ತಿಂಗಳೊಂದಕ್ಕೆ (ವಿತರಣೆ ನಷ್ಟ 33 ಸೇರಿ) ಸುಮಾರು 1700 ಯೂನಿಟ್ ವಿದ್ಯುಚ್ಛಕ್ತಿ ಉಳಿತಾಯವಾಗುತ್ತದೆ. ಇದರಿಂದ ಪ್ರತಿ ಗ್ರಾಮಕ್ಕೆ ತಿಂಗಳೊಂದಕ್ಕೆ ರೂ. 4500 ಉಳಿತಾಯವಾಗಲಿದ್ದು, ಸದರಿ ಉಳಿತಾಯವಾದ ವಿದ್ಯುಚ್ಛಕ್ತಿಯನ್ನು ವಾಣಿಜ್ಯೋದ್ಯಮಕ್ಕೆ ಸರಬರಾಜು ಮಾಡಿದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಪ್ರತಿ ತಿಂಗಳಿಗೆ ರೂ. 9,500/- ಆದಾಯ ಬರುತ್ತದೆ. ಒಟ್ಟಾರೆ ತಿಂಗಳೊಂದಕ್ಕೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಪ್ರತಿ ಗ್ರಾಮದಿಂದ ಸುಮಾರು ರೂ. 5,000/- ಅಧಿಕ ಆದಾಯ ಬರುತ್ತದೆ.

4. ಅಂದಾಜು ವೆಚ್ಚ : ಪ್ರತಿ ಗ್ರಾಮಕ್ಕೆ ರೂ. 10 ಲಕ್ಷಗಳು.

5. ಕೇಂದ್ರ ಸರ್ಕಾರದ ಸಹಾಯ ಧನ : ರೂ. 3,31,000/-

6. ಕರ್ನಾಟಕ ಸರ್ಕಾರದ ಹಣ ಹೂಡಿಕೆ : ರೂ. 6,69,000/-

7. 1000 ಗ್ರಾಮಗಳಿಗೆ ಒಟ್ಟು ಅಂದಾಜು ವೆಚ್ಚ : 1000 ಗ್ರಾಮಗಳಿಗೆ ರೂ. 100 ಕೋಟಿಗಳು ಇದರಲ್ಲಿ ರೂ. 33.1 ಕೋಟಿ ಕೇಂದ್ರ ಸರ್ಕಾರದ ಸಹಾಯ ಧನ 66.9 ಕೋಟಿ ಕರ್ನಾಟಕ ಸರ್ಕಾರದ ಹೂಡಿಕೆ.

8 ಹೂಡಿಕೆಯ ಮರು ಸಂದಾಯ : ಒಂದು ಹಳ್ಳಿಯಿಂದ ತಿಂಗಳೊಂದಕ್ಕೆ ರೂ. 60.000 ಅಧಿಕ ಆದಾಯ ಬರಲಿದ್ದು, 10 ವರ್ಷಗಳಲ್ಲಿ ಸರ್ಕಾರದ ಹೂಡಿಕೆ ಹಣ ವಾಪಸ್ಸು ಬರುತ್ತದೆ.

9. ನಿರ್ವಹಣಾ ಸಂಸ್ಥೆ : ಗ್ರಾಮ ಪಂಚಾಯಿತಿಯಿಂದ ನೇಮಿಸಲ್ಪಟ್ಟ ಒಂದು ಸಮಿತಿ ಅಥವಾ ನಿರುದ್ಯೋಗಿ ಯುವ ಜನರು ನೋಂದಾಯಿಸಿದ ಸಹಕಾರ ಸಂಸ್ಥೆ.

10. ನಿರ್ವಹಣಾ ವೆಚ್ಚ : ಪ್ರತಿ 5-ವರ್ಷಕ್ಕೊಮ್ಮೆ ಬ್ಯಾಟರಿ ಬದಲಾಯಿಸಬೇಕಾಗಿದ್ದು, ಇದಕ್ಕೆ ತಗಲುವ ವೆಚ್ಚ ರೂ. 2,40,000/– ಪ್ರತಿ ಮನೆಯಿಂದ ತಿಂಗಳೊಂದಕ್ಕೆ ರೂ. 40/– ವಸೂಲಿಯಂತೆ ಈ ವೆಚ್ಚವನ್ನು ಭರಿಸಬಹುದಾಗಿದೆ.

11. ಯೋಜನೆಯಿಂದ ಅನುಕೂಲಗಳು : ಸ್ವಾಭಾವಿಕವಾಗಿ ದೊರಕುವ ಸೌರಶಕ್ತಿಯ ಉಪಯೋಗ. ಪರಿಸರ ಸ್ನೇಹಿ, ವಿಕೇಂದ್ರಿಕೃತ ವಿದ್ಯುಚ್ಛಕ್ತಿ ಸರಬರಾಜು, ಪ್ರಸರಣೆಯಲ್ಲಾಗುವ ನಷ್ಟದ ಉಳಿತಾಯ. ಉದ್ಯೋಗಾವಕಾಶಗಳು ಮತ್ತು ಗ್ರಾಮೀಣ ಪ್ರದೇಶದ ಅಭಿವೃದ್ಧಿ.

12. ಯೋಜನೆಯ ಅನುಷ್ಠಾನ : ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯಿಂದ.

13. ಸದರಿ ಯೋಜನೆಗಳನ್ನು ಮುಂದಿನ 2 ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ಪ್ರಸಕ್ತ ಜಾರಿಯಲ್ಲಿರುವ ಎಸ್.ಪಿ.ವಿ. ಮನೆ ದೀಪ ವ್ಯವಸ್ಥೆಯ ಯೋಜನೆಯಡಿಯಲ್ಲಿ ಕಾರ್ಯಗತಗೊಳಿಸಬಹುದು.

534(650) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆರೆಗಳ ಮತ್ತು ಕೆರೆಅಂಗಳವನ್ನು ಅಕ್ರಮವಾಗಿ ಒತ್ತುವರಿ ಮಾಡಿ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರದ ಗಮನಕ್ಕೆ ಬಂದಿರುವ ಅಕ್ರಮ ಒತ್ತುವರಿ ಪ್ರಕರಣಗಳು ಯಾವುವು; (ವಿವರ ನೀಡುವುದು)

ಇ) ಈ ರೀತಿಯ ಅಕ್ರಮ ಒತ್ತುವರಿ ಪ್ರಕರಣಗಳನ್ನು ತಡೆಯಲು ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳು ಯಾವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಂದಿದೆ.

ಆ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವ 87 ಕೆರೆಗಳಲ್ಲಿ ಒತ್ತುವರಿ ಪ್ರಕರಣಗಳಿವೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕಂದಾಯ ಇಲಾಖೆ ಹಾಗೂ ಭೂ ದಾಖಲೆಗಳ ಅಧಿಕಾರಿಗಳ ಸಹಾಯದಿಂದ ಎಲ್ಲಾ ಕೆರೆಗಳ ಸರ್ವೆ ಮಾಡಿಸಿ ಹದ್ದುಬಸ್ತು ಕಲ್ಲುಗಳನ್ನು ನೆಡಿಸುವುದರ ಮೂಲಕ ಒತ್ತುವರಿಯಾದ ಜಮೀನನ್ನು ತೆರವುಗೊಳಿಸಲು ಉದ್ದೇಶಿಸಿದೆ.